ನಕ್ಷತ್ರಪಟ



ಸಂಗಮೇಶ ಗುಜಗೊಂಡ

ಕಲೆ: ಸಂತೋಷ್ ಸಸಿಹಿತ್ಲು



# ಅಮ್ಮ ಮತ್ತು ರೊಟ್ಟಿ!

ಪಟಪಟ ಪಟಪಟ
ಟಪಟಪ ಟಪಟಪ
ಅಮ್ಮನು ರೊಟ್ಟಿಯ ಬಡಿಯುವಳು
ಹಂಚಿಗೆ ಹಾಕುತ
ನಮ್ಮನು ಕರೆಯುತ
ತಿನ್ನಿರಿ ಈಗಲೆ ಎನ್ನುವಳು!

ಬಿಸಿಬಿಸಿ ರೊಟ್ಟಿಗೆ
ಬೆಣ್ಣೆಯ ಸವರುತ
ಮೇಲದು ಚಟ್ನಿಯ ಹರವುವಳು
ಉಪ್ಪಿನಕಾಯಿಯ
ಹೋಳನು ಜತೆಯಲಿ
ಇರಿಸುತ ಸವಿಯಲು ಹೇಳುವಳು!

ಬಲೂನು ತೆರದಲಿ
ರೊಟ್ಟಿಯ ಉಬ್ಬಿಸಿ
ತಿನ್ನಲು ಕುರುಕುರು ಮಾಡುವಳು
ಕೆನೆಕೆನೆ ಮೊಸರವು
ತರತರ ಖಾರವು
ರೊಟ್ಟಿಗೆ ರುಚಿಯನು ಬೆರೆಸುವಳು!

ಸುಡುಸುಡು ರೊಟ್ಟಿಯ
ತಿನ್ನುವ ಮೋದವ
ಪರಿಪರಿ ತಾನು ತಿಳಿಸುವಳು
ರೊಟ್ಟಿಯನುಂಬುವ
ಗಟ್ಟಿಗನಾಗುವ
ಸರ್ವಜ್ಞ ನುಡಿಯನು ಗುನುಗುವಳು!

ಎಲ್ಲರ ಪ್ರೀತಿಗೆ
ರೊಟ್ಟಿಯು ಪಾತ್ರವು
ರೊಟ್ಟಿಯ ಮಹತಿಯ ಸಾರುವಳು
ಬೇಸರವಿಲ್ಲದೆ
ತಟ್ಟುತ ತಟ್ಟುತ
ನಮ್ಮಲಿ ಶಕ್ತಿಯ ತುಂಬುವಳು!